ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ
ನ್ಯಾಯಾಲಯ, ದೊಡ್ಡಬಳ್ಳಾಪುರ
ಸಿಸಿ ನಂ 143/16

**ಸಿ ಡಬ್ಲೂ 6 ಪಿಡಬ್ಲೂ: 5**

| | |
|---|---|
| ಸಾಕ್ಷಿದಾರನ ಹೆಸರು | **ಮಂಜುನಾಥ್** |
| ತಂದೆ ಹೆಸರು | ಕೇಶವಮೂರ್ತಿ |
| ವಯಸ್ಸು | 30 ವರ್ಷ |
| ಉದ್ಯೋಗ | ಮಗ್ಗದ ಕೆಲಸ |
| ವಾಸ ಸ್ಥಳ | ಸಂಜಯ್‌ನಗರ, ದೊಡ್ಡಬಳ್ಳಾಪುರ |

ಈ ದಿನ ದಿನಾಂಕ 03-06-2019 ರಂದು ಸಾಕ್ಷಿಯನ್ನು ಕರೆಯಿಸಿಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಎ ಪಿ ಪಿ ರವರಿಂದ

ನಾನು ಈಗ ನೋಡುತ್ತಿರುವ ದಾಖಲೆ ಅಮಾನತ್ತು ಪಂಚನಾಮೆಯನ್ನು ನಿಪಿ-6 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ನಿಪಿ-6 ದಾಖಲೆಗೆ ಸುಮಾರು 3-4 ವರ್ಷಗಳ ಹಿಂದೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಯಾವ ವಿಚಾರಕ್ಕೆ ಸಂಬಂಧಪಟ್ಟಂತೆ ಸದರಿ ಸಹಿಯನ್ನು ಮಾಡಿರುತ್ತೇನೆ ಎಂದು ನನಗೆ ಗೊತ್ತಿರುವುದಿಲ್ಲ. ಪೋಲಿಸರು ನನ್ನ ಸುಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಈ ದಿನ ನ್ಯಾಯಾಲಯದಲ್ಲಿ ಹಾಜರುವ ಆರೋಪಿ ಈ ಮೊದಲು ನೋಡಿರುವುದಿಲ್ಲ. ಪೋಲಿಸ್ ಠಾಣೆಯಲ್ಲಿ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ. ಪ್ರಕರಣದ ಕುರಿತು ನನಗೇನು ಗೊತ್ತಿರುವುದಿಲ್ಲ.

(ಮಾನ್ಯ ಎ ಪಿ ಪಿ ಯವರು ಸಾಕ್ಷಿ ಪ್ರಕರಣದ ಕುರಿತು ನನಗೇನ್ನು ಗೊತ್ತಿರುವುದಿಲ್ಲ ಎಂದು ಹೇಳಿದ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ ಅನುಮತಿ ನೀಡಲಾಯಿತು.)

ಪಾಟೀ ಸವಾಲಿಗೆ ಮಾನ್ಯ ಎ ಪಿ ಪಿ ಯವರಿಂದ:

ದಿನಾಂಕ 07-09-2015 ರಂದು ದೊಡ್ಡಬಳ್ಳಾಪುರ ತಾಲ್ಲೂಕು ಕಛೇರಿ ರಸ್ತೆ ದೇಶ್‌ಪೇಟೆ 28ನೇ ವಾರ್ಡಿನಲ್ಲಿರುವ ಶ್ರಿ ಬನಶಂಕರಿ ಸೈಬರ್ ಕೆಫೆ ಬಳಿ ಪೋಲಿಸರು ನನ್ನ ಸಮಕ್ಷಮ ಆರೋಪಿಯು ಕಿರಣ್ ಎಂಬ ವ್ಯಕ್ತಿಗೆ ಲ್ಯಾಪ್‌ಟ್ಯಾಪ್ ಐ ಪ್ಯಾಡ್‌ನ್ನು ಕೊಟ್ಟಿರುವುದಾಗಿ ತಿಳಿಸಿ ಸದರಿ ವ್ಯಕ್ತಿಯಿಂದ ನನ್ನ ಸಮಕ್ಷಮ ಪೋಲಿಸರು ಒಂದು ಲ್ಯಾಪ್‌ಟ್ಯಾಪ್ ಐ ಪ್ಯಾಡ್‌ನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆಂದರೆ ಗೊತ್ತಿರುವುದಿಲ್ಲ. ದಿನಾಂಕ 07-09-2015 ರಂದು ಅಮಾನತ್ತುಪಡಿಸಿದ ಬಗ್ಗೆ ಹಾಗೂ ಆರೋಪಿಯನ್ನು ಗುರುತಿಸಿದ ಬಗ್ಗೆ

ಪಿ.ಡಬ್ಲೂ: 5

ಪೋಲಿಸರಿಗೆ ನಾನು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ತಾನು ನೀಡಿರುವುದಿಲ್ಲ ಎನ್ನುವ ಹೇಳಿಕೆಯ ಭಾಗವನ್ನು ನಿಪಿ-7 ಎಂದು ಗುರುತಿಲಾಯಿತು. ನಾನು ಪೋಲಿಸರ ಜೊತೆ ಹೋಗಿ ನನ್ನ ಸಮಕ್ಷಮ ವಸ್ತುಗಳನ್ನು ಅಮಾನತ್ತುಪಡಿಸಿದ್ದರು ಕೂಡ ಆರೋಪಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಶ್ರೀ ಕೆ ಕೆ ವಕೀಲರಿಂದಃ</u>

ಪಾಟೀ ಸವಾಲು ಇರುವುದಿಲ್ಲ.

(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ದೊಡ್ಡಬಳ್ಳಾಪುರ